investigation ಅನ್ನು ಮಾಡುತ್ತಾರೋ, ಇದನ್ನೂ ಕೂಡ ನಾವು ನೋಡಬೇಕಾಗುತ್ತದೆ. ಅದಕ್ಕಾಗಿ ನಮ್ಮ ಪಾತ್ರ ಏನಿತ್ತು ಅಥವಾ ನಾವೇನು ಕೆಲಸ ಮಾಡಬೇಕಾಗಿತ್ತು, ಆ ಕೆಲಸವನ್ನು ಬಹಳ ದಕ್ಷತೆಯಿಂದ ನಮ್ಮ ಅಧಿಕಾರಿಗಳು ಮಾಡಿಕೊಂಡು ಬಂದಿದ್ದಾರೆ. ಇನ್ನು ಮುಂದೆಯೂ ಕೂಡ ಆ ಸುಪ್ರೀಂ ಕೋರ್ಟ್ ಆದೇಶವಾಗಲೀ, ಆ ಹೈಕೋರ್ಟ್ ಆದೇಶವಾಗಲಿ ಏನೇನು ಬರುತ್ತದೋ ಅದನ್ನು ನಾವು ಪಾಲನೆ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಗೃಹಸಚಿವರಲ್ಲಿ ನಾನು ಕೇಳುತ್ತಿರುವುದು ಇಷ್ಟೇನೆ. ನಮ್ಮ ಪೋಲಿಸ್ ಇಲಾಖೆಯವರು ಕೇಸ್‌ನ್ನು investigation ಮುಂದುವರಿಸಿದ್ದೀರಾ ಅಥವಾ ಸ್ಥಗಿತ ಮಾಡಿದ್ದೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದ್ದೇನೆ, ನಮ್ಮ STAMPIT ಇನ್ನೂ ಇದೆ. ಏಕೆಂದರೆ ಅವರು ಸಂಪೂರ್ಣವಾಗಿ ಎಲ್ಲಾ ಕೇಸಸ್‌ನ್ನೂ CBI ತೆಗೆದುಕೊಳ್ಳುವವರೆಗೆ ನಾವು ಇದರ ಬಗ್ಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಲೇಬೇಕಾಗುತ್ತದೆ. ಏಕೆಂದರೆ, ರಾಷ್ಟ್ರದ ಹಿತದೃಷ್ಟಿಯಿಂದ ಮತ್ತು ಒಂದು ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡತಕ್ಕ ಕೇಸ್ ಇರುವುದರಿಂದ ನಮ್ಮವರು ಇನ್ನೂ ಕೂಡ ಈ investigation ನ್ನು ಮಾಡುತ್ತಲೇ ಇದ್ದಾರೆ, continue ಮಾಡುತ್ತಿದ್ದಾರೆ. Till CBI takes all the cases ಮಾಡುತ್ತಾರೆ. Suppose ಅವರು ಹತ್ತು ಕೇಸುಗಳನ್ನು ತೆಗೆದುಕೊಂಡರು, ಇನ್ನು ಉಳಿದದ್ದು ಐದಾದರೂ ಮಾಡಬೇಕು, ಎರಡಾದರೂ ಮಾಡಲೇಬೇಕಾಗುತ್ತದೆ. ಅದಕ್ಕಾಗಿ ನಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳತಕ್ಕಂಥದ್ದನ್ನು ನಾವು ಮಾಡುತ್ತಿಲ್ಲ. ಆದರೆ ಈ ರೀತಿಯಾಗಿ ಬೇಜವಾಬ್ದಾರಿ ಮಾತುಗಳನ್ನು ಹೇಳಿಕೊಂಡು ಟೀಕೆ ಟಿಪ್ಪಣಿ ಮಾಡತಕ್ಕಂಥದ್ದು ಸರಿಯಲ್ಲ. ಅದನ್ನು ಅವರು ತಿಳಿದುಕೊಳ್ಳಬೇಕಾಗಿತ್ತು. ದುರ್ದೈವದಿಂದ ಅವರು ಅದನ್ನು ಏಕೆ ಈ ರೀತಿಯಾಗಿ ಮಾಡಿದ್ದಾರೋ ಗೊತ್ತಿಲ್ಲ. ಮತ್ತು ಇನ್ನೊಂದು CBI ನವರು details ಅನ್ನು ಕೇಳಿದ್ದಾರೆ. ಅಂದರೆ Supreme Court has given two weeks time to all state Governments to give report to CBI. CBI will take three weeks time and decide which cases they will take. ಈ ಸ್ಥಿತಿಯಲ್ಲಿದೆ. ಖಂಡಿತವಾಗಿ ನಾವು CBI ಗೂ Co-operate ಮಾಡುತ್ತೇವೆ, ಮತ್ತು ಹೈಕೋರ್ಟ್‌ಗಳಿಗೂ ಕೂಡ ನಮ್ಮ ಸಹಕಾರ ಇರುತ್ತದೆ ಏಕೆಂದರೆ ಇದರಲ್ಲಿ ಸತ್ಯಾಂಶ ಹೊರಗೆ ಬರಲಿ ಎನ್ನತಕ್ಕಂಥದ್ದೇ ನಮ್ಮ ಆಸೆ.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು:

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 151(2)ನೆಯ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್ 2002ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಜಿಲ್ಲಾ ಪಂಚಾಯತ್ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

4. ಕಾರ್ಯದರ್ಶಿಯವರ ವರದಿ:

ಶ್ರೀ ಟಿ.ರಾಜಣ್ಣ(ಕಾರ್ಯದರ್ಶಿಗಳು) : ಮಾನ್ಯ ಅಧ್ಯಕ್ಷರೇ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(1) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ, 2004.(ಅನುಬಂಧ–I)